# ಕಲೆ ಜನರನ್ನು ಮುಟ್ಟುವಂತಿರಬೇಕು

**ಕೋಡಿಬೆಟ್ಟು ರಾಜಲಕ್ಷ್ಮಿ**

ಕೇರಳದ ಎರ್ನಾಕುಲಂನ 'ಪೆರವೋಂ' ನಿರ್ಮಲಾ ಪಣಿಕ್ಕರ್ ಅವರ ಹುಟ್ಟೂರು. ಬಾಲ್ಯದಲ್ಲಿ ಅಸ್ತಮಾ ಸಮಸ್ಯೆ ಎದುರಾದಾಗ ನಿರ್ಮಲಾ ಅವರ ತಂದೆ ನೃತ್ಯ ತರಗತಿಗೆ ಮಗಳನ್ನು ಸೇರಿಸಿದರು. ನೃತ್ಯವು ಒಳ್ಳೆಯ ವ್ಯಾಯಾಮ ಎನ್ನುವ ಕಾರಣಕ್ಕಾಗಿ ಈ ವ್ಯವಸ್ಥೆ ಮಾಡಿದ್ದರು. ಹೀಗೆ ಆಕಸ್ಮಿಕವಾಗಿ ಪರಿಚಿತಗೊಂಡ ನೃತ್ಯದ ಹಾದಿಯನ್ನೇ ಹಿಡಿದು ಹೊರಟ ನಿರ್ಮಲಾ, ಕಲಾಮಂಡಲಂ ಕಲ್ಯಾಣಿಕುಟ್ಟಿ ಅಮ್ಮ ಅವರಿಂದ ಮೋಹಿನಿಯಾಟ್ಟಂ ನೃತ್ಯ ಕಲಿತರು. ಆ ಕಾಲಕ್ಕೆ ಮೋಹಿನಿಯಾಟ್ಟಂ ಭರತನಾಟ್ಯದ ಸಹವರ್ತಿ ಎಂಬ ಹಣೆಪಟ್ಟಿ ಅಂಟಿಸಿಕೊಂಡಿತ್ತು. ಆದರೆ ಆ ನೃತ್ಯಕ್ಕೆ ತನ್ನದೇ ಆದ ಮಾರ್ಗವೊಂದಿದೆ ಎಂಬುದನ್ನು ಗುರುತಿಸಿದ ನಿರ್ಮಲಾ, ವೇದಿಕೆಯಲ್ಲಿ ನೃತ್ಯ ಪ್ರದರ್ಶನ ನೀಡಿ ಕಲಾವಿದೆಯಾಗುವುದಕ್ಕಿಂತ, ಅಧ್ಯಯನ ಮಾರ್ಗವನ್ನು ಆರಿಸಿಕೊಂಡು, ಕಲಾಪ್ರಕಾರಕ್ಕೇ ಹೊಸ ರೂಪು ನೀಡಲು ಟೊಂಕಕಟ್ಟಿ ನಿಂತರು. ಇತಿಹಾಸವನ್ನು ತಿಳಿಯುತ್ತ, ನಾಟ್ಯಕ್ಕೊಂದು ರೂಪವನ್ನು ಕೊಡುತ್ತ, ಶಿಷ್ಯವರ್ಗವನ್ನು ರೂಪಿಸಲು ಬದುಕನ್ನು ಮುಡಿಪಾಗಿಟ್ಟರು. ಪ್ರಸ್ತುತ ಇರಿಂಜಾಲಕುಡದಲ್ಲಿ ಅವರು 'ನಟನ ಕೈಶಿಕಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ತಮ್ಮ ಶಿಷ್ಯವರ್ಗಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ. ನೃತ್ಯಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ಬರೆದಿದ್ದಾರೆ. ಅವರಿಗೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ , ಕೇರಳ ನೃತ್ಯ ನಾಟ್ಯ ಪುರಸ್ಕಾರ ಸೇರಿದಂತೆ ಹಲವು ಗೌರವಗಳು ಸಂದಿವೆ. 73ರ ಹರೆಯಲ್ಲಿ ಅವರು ವಿದ್ವತ್ಪೂರ್ಣ ಲೇಖನಗಳನ್ನು ರಚಿಸುತ್ತ, ತಮ್ಮ ಬಳಿಗೆ ಬರುವ ಜ್ಞಾನದಾಹಿ ಶಿಷ್ಯೆಯರ ಕುತೂಹಲ ತಣಿಸುತ್ತ, ಅವರಿಗೆ ಪಾಠ ಹೇಳುತ್ತ ನೃತ್ಯಕಲಾ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ಅವರೊಡನೆ 'ಮಯೂರ' ನಡೆಸಿದ ಮಾತುಕತೆಯ ಮುಖ್ಯವಾದ ಭಾಗಗಳು ಇಲ್ಲಿವೆ.